ಕೊನೆಗೂ ಶೇಷಗಿರಿಯ ಮನಸ್ಸಲ್ಲಿ ನಿಂತಿದ್ದು ಸರಿ ರಾತ್ರಿ ಯಾರೋ ಕಿವಿಯಲ್ಲಿ ಪಿಸುಗುಟ್ಟಿದಂತಾಗಿ ತಾನು ಎದ್ದು ಕುಳಿತ ಗಳಿಗೆಯಲ್ಲೇ ಅಲ್ಲಿ ಯಾರೋ ಈ ಮನುಷ್ಯನ ಮೇಲೆ ಕಲ್ಲು ಎತ್ತಿ ಹಾಕಿದ್ದಿರಬಹುದೇ ಎಂಬ ಗುಮಾನಿ! ತುಂಬ ಎಂದರೆ ತುಂಬ ಹಿಂದಿನಿಂದಲೂ ಶೇಷಗಿರಿಗೆ ಈ ಕಿವಿಯಲ್ಲಿ ಪಿಸುಗುಟ್ಟಿದ್ದು ಕೇಳಿಸುವ ಕಾಯಿಲೆ ಇತ್ತು. ತೀರಾ ಎಂದರೆ ತೀರಾ ಸ್ಪಷ್ಟವಾಗಿ ತನ್ನ ಹೆಸರಿಡಿದು ಕರೆದಂತೆಯೋ, ಏನನ್ನೋ ಮಾಡಲು ಆದೇಶ ನೀಡಿದಂತೆಯೋ ಅವನಿಗೆ ಕೇಳಿಸಿದ್ದಿದೆ. ಆಗೆಲ್ಲ ಅವನು ಎಲ್ಲಾ ಸದ್ದು ನಿಲ್ಲಿಸಿ ಮತ್ತೆ ಏನಾದರೂ ಕೇಳಿಸಬಹುದೇ ಎಂದು ಆಲಿಸುವುದೂ ಇದೆ. ಆದರೆ ಹಾಗೆಂದೂ ಆದದ್ದಿಲ್ಲ ಎನ್ನುವುದು ಸತ್ಯವೇ. ಆದರೆ ಹಿಂದಿನ ರಾತ್ರಿ ತಾನು ಮಲಗಿದ್ದಲ್ಲಿಂದ ನೂರು ಮೀಟರ್ ಅಂತರದೊಳಗೇ ತನ್ನಂತೆಯೇ ಇರುವ ಇನ್ನೊಂದು ಮಾನವ ಜೀವದ ಬರ್ಬರ ಹತ್ಯೆ ನಡೆಯುತ್ತಿದ್ದಾಗಲೂ, ಅದರ ಹುನ್ನಾರ, ಪ್ರಯತ್ನ ಎಲ್ಲ ಸಾಗುತ್ತಿದ್ದಾಗಲೂ ಇಡೀ ಜಗತ್ತು, ಜಗತ್ತು ಸಾಯಲಿ, ಊರಿನ ಮಂದಿ ಸ್ವಸ್ಥ ಮಲಗಿದ್ದುದೇ ಅವನಿಗೊಂದು ಮಹದಾಶ್ಚರ್ಯವಾಗಿ ಕಂಡಿತು. ತಾನು ಧಡಕ್ಕನೆ ಎದ್ದು ಕೂತಿದ್ದೆ ಎಂಬ ಸಂಗತಿಯೇ ಇಂಥ ಆಶ್ಚರ್ಯಕ್ಕೆ ಕಾರಣವಲ್ಲವೆ, ದಿನವೂ ಜಗತ್ತಿನಲ್ಲಿ ಎಷ್ಟೊಂದು ಕೊಲೆ, ಹಿಂಸೆ, ರಕ್ತಪಾತ ನಡೆಯುತ್ತಲೇ ಇದೆಯಲ್ಲವೆ, ಅದನ್ನೆಲ್ಲ ಬೆಳಿಗ್ಗೆ ಪೇಪರಿನಲ್ಲಿ ಅತ್ಯಂತ ಸಹಜವೆಂಬಂತೆ ಓದಿ ಮರೆತು ನಾವೆಲ್ಲ ಹಾಯಾಗಿಲ್ಲವೆ ಎಂದೂ ಅನಿಸಿತು. ಅದೆಲ್ಲದರ ನಡುವೆಯೂ ಯಾಕೊ ಒಂದು ಕ್ಷಣ, ಒಂದೇ ಒಂದು ಕ್ಷಣ ಹಾಗೆ ಯಾರೋ ಕೆಲವರು ಎತ್ತಿ ಹಾಕಿದ ಕಲ್ಲು ತನ್ನ ತಲೆಯ ಮೇಲೇ ಬಿದ್ದಿದ್ದರೆ, ತಾನು ಧಡಕ್ಕನೆ ಹಾಗೆ ಏಳದೇ ಇದ್ದರೆ ಬಿದ್ದೇ ಬೀಳುತ್ತಿತ್ತೆ ಎಂದೆಲ್ಲ ಅನಿಸಿ ಸಣ್ಣಗೆ ಬೆವರಿದ.

ಸ್ವಲ್ಪ ಹೊತ್ತಿಗೆ "ಬನ್ನಿ, ನಿಮ್ಮ ಹತ್ರ ಸ್ವಲ್ಪ ಮಾತನಾಡಲಿಕ್ಕುಂಟು, ಚಾ ಕುಡಿದು ಬರುವಾ" ಎಂದು ಕರೆದ ವಸಂತ. ಎದ್ದು ಅವನ ಜೊತೆ ಕ್ಯಾಂಟೀನಿನತ್ತ ನಡೆದ ಶೇಷಗಿರಿ. ಕ್ಯಾಂಟೀನಿನಲ್ಲಿ ಸ್ಟಾಫ್ ಸೇರಿಕೊಂಡು ಸಂಬಳ ಹೆಚ್ಚಾಗುವ ಸಾಧ್ಯತೆಯ ಬಗ್ಗೆ ಅವರಿವರು ಹೇಳಿದ್ದು ಕೇಳಿದ್ದು ಎಲ್ಲ ಹಿಡಿದುಕೊಂಡು ಭಯಂಕರ ಚರ್ಚೆಯಲ್ಲಿ ತೊಡಗಿದ್ದರು. ಎರಡು ಟೀ ಹಿಡಿದುಕೊಂಡು ಬಂದವರು ಕುಪ್ಪುಸ್ವಾಮಿ ಕುಳಿತಿದ್ದಲ್ಲಿಗೆ ಹೋಗಿ ಕೂತರು. ಈ ಕುಪ್ಪುಸ್ವಾಮಿ ಅವಿದ್ಯಾವಂತ. ಸರ್ವಿಸಿನುದ್ದಕ್ಕೂ ಕಂಡೆಕ್ಟರ್ ಆಗಿಯೇ ದುಡಿದಿದ್ದ. ಇನ್ನೇನು ಎರಡು ಮೂರು ತಿಂಗಳಲ್ಲಿ ರಿಟೈರ್ ಆಗಲಿದ್ದ ಕುಪ್ಪುಸ್ವಾಮಿಗೆ ಒಂದು ಚಿಂತೆ ಕಾಡುತ್ತಿತ್ತು. ಕುಪ್ಪುಸ್ವಾಮಿ ಬಡ್ಡಿ ವ್ಯವಹಾರ ನಡೆಸುತ್ತಿದ್ದ ಜನ. ಸುಮಾರು ಏಳು ನೂರು ಮಂದಿಯ ಕೈಲಿ ಪ್ರತಿ ತಿಂಗಳು ಒಂದನೇ ತಾರೀಕಿಗೆ ಹತ್ತಿರ ಹತ್ತಿರ ಮೂರು ಲಕ್ಷ ಬಡ್ಡಿ ವಸೂಲು ಮಾಡಿ ಅದರ ಲೆಕ್ಕ ಇಟ್ಟು ನಿಭಾಯಿಸುತ್ತಿದ್ದ ಎಂದರೆ ಊಹಿಸಿಕೊಳ್ಳಿ. ಸಂಬಳದ ದಿನ ತಪ್ಪಿಸಿಕೊಂಡವರನ್ನು ಎಲ್ಲಿ ಹಿಡಿಯಬೇಕು, ಹೇಗೆ ಹಿಡಿಯಬೇಕು, ಯಾರಿಂದ ಹಿಡಿಸಬೇಕು ಎಂದೆಲ್ಲ ಗೊತ್ತಿದ್ದ ಮನುಷ್ಯ. ಅವನ ಹತ್ತಿರ ನಂಬರ್ ಪ್ಲೇಟ್ ಇಲ್ಲದ ಲಾರಿ ಕೂಡ ಉಂಟು ಎನ್ನುವವರಿದ್ದಾರೆ. ಊರಿನಲ್ಲಿ ಎಲ್ಲಿ ಸಂಸಾರ ಸಮೇತ ವಿಷ ಕುಡಿದು ಸತ್ತ ಸುದ್ದಿ, ಆತ್ಮಹತ್ಯೆ ಮಾಡಿಕೊಂಡ ಸುದ್ದಿ, ಕೊಲೆಯ ಸುದ್ದಿ ಇದ್ದರೂ ಅದರ ಒಳಮರ್ಮ ಏನಿತ್ತೆಂದು ನಮಗೆಲ್ಲ ವಿವರಿಸುತ್ತಿದ್ದ ಮನುಷ್ಯ ಈತನೇ. ಆದರೆ ಅದನ್ನೆಲ್ಲ ಹೇಗೆ ಹೇಳುತ್ತಿದ್ದ ಎಂದರೆ ಎಲ್ಲ ಕೇಳಿಯಾದ ಮೇಲೆ ಕುಪ್ಪುಸ್ವಾಮಿ ಹೇಳಿದ್ದು ಏನೂ ಇರುತ್ತಿರಲಿಲ್ಲ! ಎಲ್ಲ ನಾವೇ ಪ್ರಶ್ನೆ ಹಾಕಿ, ಊಹಿಸಿದ ಉತ್ತರ ಕೊಟ್ಟು ಅವನಿಂದ ಹೂಂ, ಹಾಗೇ ಆಗಿರುತ್ತೆ ಬಿಡಿ, ಮತ್ತೇನಿರಲು ಸಾಧ್ಯ, ಅಲ್ವೇ, ಮುಂತಾದ ನುಡಿ ಪಡೆದಿದ್ದಷ್ಟೇ! ಅದೇನಿದ್ದರೂ ಕುಪ್ಪುಸ್ವಾಮಿಯ ಪ್ರಕಾರ ಇಂಥ ಪ್ರಕರಣಗಳಲ್ಲಿ ನೂರಕ್ಕೆ ತೊಂಬತ್ತೈದು ಬಡ್ಡಿ ವ್ಯವಹಾರದ್ದೇ. ಸಾಲ ವಾಪಸ್